ಅ) ರಾಜ್ಯದಲ್ಲಿ ಇತ್ತೀಚೆಗೆ ಪದೇ ಪದೇ ನೀರಾವರಿ ಕಾಲುವೆಗಳಲ್ಲಿ ಬಿರುಕು ಉಂಟಾಗುತ್ತಿರುವುದು ನಿಜವೇ? ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು?

ಆ) ಕಳೆದ 3 ವರ್ಷಗಳಲ್ಲಿ, ಈ ರೀತಿ ಬಿರುಕು ಉಂಟಾದ ಕಾಲುವೆಗಳೆಷ್ಟು ಹಾಗೂ ಅವುಗಳು ಯಾವುವು?

ಇ) ಈ ರೀತಿ ಬಿರುಕು ಉಂಟಾಗಲು ಕಾರಣರಾದವರ ವಿರುದ್ಧ ಸರ್ಕಾರದವರು ಕ್ರಮ ಕೈಗೊಳ್ಳಲು ಉದ್ದೇಶಿಸಿದ್ದಾರೆಯೇ?

ಶ್ರೀ ಕೆ.ಎನ್.ನಾಗೇಗೌಡ (ಬೃಹತ್ ನೀರಾವರಿ ಸಚಿವರು):

ಅ) ಹೌದು, ಕಾಲುವೆಗಳು ಬಹಳ ಹಳೆಯದಾಗಿರುವುದರಿಂದ ಕಾಲುವೆ ನಿರ್ಮಾಣದ ಸಮಯದಲ್ಲಿ ಸ್ಥಳೀಯ ಲಭ್ಯವಿರುವ ಮಣ್ಣನ್ನು ಉಪಯೋಗಿಸಿರುವ ಕಾರಣ (ಕೆಲವು ಕಾಲುವೆಗಳಲ್ಲಿ) ಏಡಿ, ಹೆಗಣಗಳು ನಾಲೆಯ ಮಣ್ಣೇರಿಯನ್ನು ಕೊರೆಯುವುದರಿಂದ ಬಿರುಕುಗಳು ಉಂಟಾಗಿರುತ್ತವೆ.

ಆ) ಕಳೆದ 3 ವರ್ಷಗಳಲ್ಲಿ ಬಿರುಕು ಉಂಟಾಗಿರುವ ಕಾಲುವೆಗಳು-7 ಅವುಗಳೆಂದರೆ ತುಂಗಭದ್ರಾ ಎಡದಂಡೆ ಕಾಲುವೆ, ಹಾರಂಗಿ ಯೋಜನೆಯ ಕೆ.ಆರ್.ನಗರ ಶಾಖೆ, ವಿಶ್ವೇಶ್ವರಯ್ಯ ನಾಲೆಯಲ್ಲಿ ಕಿ.ಮೀ. ಕಾವೇರಿ ಶಾಖೆ, ಮದ್ದೂರು ಶಾಖೆ, ಕೆರೆಗೋಡು ಶಾಖೆ, ನಾರಾಯಣಪುರ ಎಡದಂಡೆ ಕಾಲುವೆ.

ಇ) ಬಿರುಕು ಉಂಟಾದ ಬಗ್ಗೆ ಪರಿಶೀಲಿಸಿದಾಗ ತಪ್ಪಿತಸ್ಥರೆಂದು ಕಂಡು ಬಂದಲ್ಲಿ ಅವರುಗಳ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಉಡುಪಿ ಜಿಲ್ಲೆಯಲ್ಲಿ ಪೋಲೀಸ್ ವಸತಿ ಗೃಹಗಳು

40 (24)

ಶ್ರೀ ಯು.ಆರ್.ಸಭಾಪತಿ (ಉಡುಪಿ): ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಪೊಲೀಸ್ ಇಲಾಖೆಯಲ್ಲಿ ಇರುವ ನೌಕರರ ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಇದರಲ್ಲಿ ಎಷ್ಟು ಜನರಿಗೆ ವಸತಿ ಸೌಕರ್ಯ ಕಲ್ಪಿಸಲಾಗಿದೆ?

ಇ) ಉಡುಪಿ ಜಿಲ್ಲೆಯ ಎಷ್ಟು ನೌಕರರಿಗೆ ವಸತಿ ಸೌಕರ್ಯ ಕಲ್ಪಿಸಲಾಗಿದೆ?

ಈ) ಎಲ್ಲಾ ನೌಕರರಿಗೂ ವಸತಿ ಸೌಕರ್ಯ ಒದಗಿಸುವ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಆರ್.ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು):

ಅ) 59,688 ಜಿಲ್ಲಾವಾರು ಮಾಹಿತಿಯನ್ನು ಲಗತ್ತಿಸಿದೆ.

ಆ) 25,713.

ಇ) 265.

ಸಿ.ಪಿ.ಐ. 2, ಪಿ.ಎಸ್.ಐ. 8, ಎ.ಎಸ್.ಐ 2, ಹೆಚ್.ಸಿ.ಗಳು 65, ಪಿ.ಸಿ.ಗಳು 188

ಈ) 1) ಪೋಲೀಸ್ ಸಿಬ್ಬಂದಿಗಳಿಗೆ ವಸತಿ ಗೃಹಗಳನ್ನು ನಿರ್ಮಾಣ ಮಾಡುವುದಕ್ಕಾಗಿ ಕರ್ನಾಟಕ ರಾಜ್ಯ ಪೊಲೀಸ್ ಗೃಹ ನಿರ್ಮಾಣ ಸಂಸ್ಥೆಯನ್ನು ಸ್ಥಾಪಿಸಲಾಗಿದೆ.

2) ಪೊಲೀಸ್ ವಸತಿ ಗೃಹಗಳ ನಿರ್ಮಾಣಕ್ಕಾಗಿ ಪ್ರತಿ ವರ್ಷವೂ ಸರ್ಕಾರದಿಂದ ಅನುದಾನವನ್ನು ನೀಡಲಾಗುತ್ತಿದೆ.

3) ಪೊಲೀಸ್ ಗೃಹ ನಿರ್ಮಾಣ ನಿಗಮವು ವಿವಿಧ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆಯಲು ಸರ್ಕಾರದ ಗ್ಯಾರಂಟಿಯನ್ನು ನೀಡಲಾಗುತ್ತಿದೆ.

4) 1996-97ನೇ ಸಾಲಿನಲ್ಲಿ ವಿವಿಧ ಹುದ್ದೆಗಳ ಪೊಲೀಸ್ ಸಿಬ್ಬಂದಿಯವರಿಗೆ 42 ಕೋಟಿ ರೂ. ವೆಚ್ಚದಲ್ಲಿ 2,234 ವಸತಿ ಗೃಹಗಳನ್ನು ನಿರ್ಮಿಸಲು ಕರ್ನಾಟಕ ರಾಜ್ಯ ಪೋಲೀಸ್ ವಸತಿ ನಿಗಮದ ಆದ್ಯತಾ ಪಟ್ಟಿಗೆ ಸರ್ಕಾರದ ಅನುಮೋದನೆ ನೀಡಲಾಗಿದೆ.

5) ಪರ್ಸ್ಪೆಕ್ಟಿವ್ ಪ್ಲಾನ್ ಯೋಜನೆಯಲ್ಲಿ ಎಲ್ಲಾ ದರ್ಜೆಯ ಪೋಲೀಸ್ ಸಿಬ್ಬಂದಿಗಳಿಗೆ ಹಂತ ಹಂತವಾಗಿ ವಸತಿ ಗೃಹಗಳ ಸೌಲಭ್ಯವನ್ನು ಕಲ್ಪಿಸುವ ಯೋಜನೆ ಸರ್ಕಾರದ ಮುಂದಿದೆ.

ANNEXURE

Statement showing the number of Officers/Officials in the Police Dept. (district/Unitwise)

SL. No.	Units	Gazetted	Non Gazetted	Total
1.	Bangalore City	616)		
2.	Bangalore Dist	30)	15,530	16,176
3.	Tumkur Dist	30	1,446	1,476
4.	Kolar	26	1,277	1,303
5.	K.G.F.	10	565	575
6.	Mysore city	39)		
7.	Mysore Dist	25)	2,852	2,916
8.	Chamarajanagar Dist.	12	541	553
9.	Mandya Dist	20	1,218	1,238
10.	Hassan	26	1,177	1,203
11.	Kodagu	19	876	895
12.	Hubli-Dharwad	39)		
13.	Dharwad Dist.	22)	3,492	3,553
14.	Belgaum	62	2,370	2,432
15.	Bijapur	30	1,148	1,178
16.	Bagalkot	03	865	868

18. D.K.Mangalore	38	1,527	1,565
19. Udupi	10	682	692
20. Chickmagalur	24	1,092	1,116
21. U.K.Karwar	25	1,495	1,520
22. Chitradurga	19	845	864
23. Davanagere	18	826	844
24. Bellary	33	1,605	1,638
25. Haveri	12	668	680
26. Shimoga	34	1,602	1,636
27. Bidar	23	1,331	1,354
28. Gulbarga	52	2,341	2,393
29. Raichur	20	1,104	1,124
30. Koppal	12	472	484
Total	1,339	49,490	50,829

K.S.R.P. (10 Battalions)

Spl RSI	ARSI	HAV	NAIK	LANS NAIK	PC	Follower Jamedar	Follower	
172	025	1045	253	78	5674	4	716	7,967

WIRELESS

PSI	WPST	ASI	WASI	HC	WHC	PC	WPC	
105	-	246	-	394	-	147	-	892